ಮೂಲ ದಾವಾ ನಂಃ 40/2018

ಡಿ ಡಬ್ಲುಃ 01

ಸಾಕ್ಷಿಯನ್ನು ದಿನಾಂಕಃ **13.02.2026.** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀಮತಿ ಎ.ಎಸ್.ಎಸ್(ಬಿ) ವಾದಿ ಪರ ವಕೀಲರಿಂದಃ**

ಆಸ್ತಿ ಖರೀದಿಯನ್ನು ನೋಂದಣಿ ಮಾಡುವ ಕಾಲಕ್ಕೆ ಮಾರಾಟಗಾರ ಅವನೇ ಆಗಿರುತ್ತಾನೆ ಎಂದು ಅವನ ಗುರುತಿಸುವಿಕೆಯ ಪುರಾವೆಗಾಗಿ ಸದರಿಯವರ ಗುರುತಿನ ಚೀಟಿಯನ್ನು ತೆಗೆದುಕೊಳ್ಳಲಾಗುತ್ತದೆ ಎಂದರೆ, ಸಾಕ್ಷಿಯು ತೆಗೆದುಕೊಂಡಿರಬಹುದು, ನಾನು ಸಣ್ಣವನಿದ್ದೆ, ನನಗೆ ಗೊತ್ತಿಲ್ಲ. ಈಗಿನ ಕಾಲದಲ್ಲಿ ಚುನಾವಣಾ ಗುರುತಿನ ಚೀಟಿ ಮತ್ತು ಆಧಾರ ಕಾರ್ಡ ತೆಗೆದುಕೊಳ್ಳುತ್ತಾರೆ ಎಂದರೆ ಸರಿ. ನಾನು ಖರೀದಿ ಆಗಿದೆ ಎಂದು ಹೇಳುವ ಕಾಲದಲ್ಲಿ ಪುರಾವೆಗಾಗಿ ಗುರುತಿನ ಚೀಟಿ ಮತ್ತು ಆಧಾರ ಕಾರ್ಡ ಇರಲಿಲ್ಲ ಎಂದರೆ , ನನಗೆ ಗೊತ್ತಿಲ್ಲ. ಆ ಕಾಲದಲ್ಲಿ ವ್ಯಕ್ತಿಯ ಗುರುತಿನ ಬಗ್ಗೆ ಖರೀದಿಗೆ ಕೊಡುತ್ತಿರುವ ವ್ಯಕ್ತಿಯ ಬಗ್ಗೆ ಮತ್ತು ಆ ವ್ಯವಹಾರಕ್ಕೆ ಸಂಬಂಧಪಟ್ಟಂತೆ, ಆ ವ್ಯಕ್ತಿಯನ್ನು ಗುರುತಿಸಬಹುದಂತಹ ಸಾಕ್ಷಿಗಳು ಇರುತ್ತಿದ್ದರು ಎಂದರೆ ಸರಿ. ನಾನು ಹೇಳುವಂತಹ 1991 ನೇ ಸಾಲಿನ ಖರೀದಿ ವ್ಯವಹಾರಕ್ಕೆ ಯಾವುದೇ ಸಾಕ್ಷಿದಾರರು ಇಲ್ಲ ಎಂದರೆ, ಸಾಕ್ಷಿದಾರರು ಇದ್ದಾರೆ ಎಂದು ನುಡಿಯುತ್ತಾರೆ.

ಸದರಿ ಖರೀದಿ ವ್ಯವಹಾರಕ್ಕೆ ಸಾಕ್ಷಿದಾರರು ಇರಲಿಲ್ಲ, ಅವರ ಅಜ್ಜ ಆಸ್ತಿಯನ್ನು ಖರೀದಿಗೆ ಕೊಡಲು ಹೋಗಿರಲಿಲ್ಲ ಎನ್ನುವುದನ್ನು ತೋರಿಸಲು ವಾದಿಯರು ನಿಪಿ.7 ನ್ನು ಹಾಜರುಪಡಿಸಿರುತ್ತಾರೆ ಎಂದರೆ ಸುಳ್ಳು. ಒಂದುವೇಳೆ ನಿಪಿ.7 ರ ಮೂಲ ಪ್ರತಿಯನ್ನು ನಾವು ಹಾಜರುಪಡಿಸಿದ್ದಲ್ಲಿ, ಅದಕ್ಕೆ ಸಾಕ್ಷಿದಾರರ ಸಹಿ, ಖರೀದಿಗೆ ಕೊಟ್ಟವರ ಸಹಿ ಇಲ್ಲ ಎನ್ನುವುದು ತಿಳಿದುಬರುತ್ತದೆ ಎನ್ನುವ ಕಾರಣಕ್ಕಾಗಿ ನಾವು ಅದನ್ನು ಹಾಜರುಪಡಿಸಿರುವುದಿಲ್ಲ ಎಂದರೆ, ನಮ್ಮ ತಂದೆಯವರು ಬ್ಯಾಂಕಿನಲ್ಲಿ ಸಾಲವನ್ನು ತೆಗೆದುಕೊಳ್ಳುವಾಗ ಸದರಿ ಖರೀದಿ ಪತ್ರವನ್ನು ಅಡವಿಟ್ಟಿದ್ದು, ಆ ಬಗ್ಗೆ ಬ್ಯಾಂಕಿನಲ್ಲಿ ವಿಚಾರವನ್ನು ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ. ನಾನು ಈ ದಾವೆಯಲ್ಲಿ ಪ್ರತಿವಾದ ಪತ್ರವನ್ನು ಸಲ್ಲಿಸುವ ಕಾಲಕ್ಕೆ ಖರೀದಿ ಪತ್ರ ಬ್ಯಾಂಕಿನಲ್ಲಿ ಇತ್ತು ಎನ್ನುವ ವಿಷಯ ನನಗೆ ಗೊತ್ತಿರಲಿಲ್ಲ. ಸದರಿ ವಿಷಯ ನನಗೆ ಕೇಸ್ ನಡೆಯುತ್ತಿರುವಾಗ ತಿಳಿಯಿತು. ಸದರಿ ವಿಷಯ ನನಗೆ ತಿಳಿದುಬಂದ ನಂತರ, ಸದರಿ ದಾಖಲಾತಿಯನ್ನು ಹಾಜರುಪಡಿಸಲು ನಾನು ಏನು ಕ್ರಮ ಕೈಗೊಂಡಿರುತ್ತೇನೆ ಎಂದರೆ , ಸಾಕ್ಷಿಯು ನಮ್ಮ ತಂದೆಯವರು ಎಸ್.ಬಿ.ಎಂ ಬ್ಯಾಂಕಿನಲ್ಲಿ ಸಾಲವನ್ನು ತೆಗೆದುಕೊಂಡಿದ್ದರು, ನಾವು ಆ ಬಗ್ಗೆ ವಿಚಾರಣೆ ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ. ನಮ್ಮ ಎಸ್.ಬಿ.ಎಂ ಸಾಲ ತೆಗೆದುಕೊಂಡಿದ್ದರು ಮತ್ತು ಸದರಿ ಸಾಲ ತೆಗೆದುಕೊಳ್ಳುವ ಕಾಲಕ್ಕೆ ಅವರು ಖರೀದಿ ಪತ್ರವನ್ನು ಅಡವಿಟ್ಟಿದ್ದರು, ಎಸ್.ಬಿ.ಎಂ ಬ್ಯಾಂಕ್ ಎಸ್.ಬಿ.ಐ ಬ್ಯಾಂಕನೊಂದಿಗೆ ವಿಲೀನವಾದ ನಂತರ, ಆ ದಾಖಲಾತಿ ಎಸ್.ಬಿ.ಐ ಬ್ಯಾಂಕಿಗೆ ಹೋಗಿರುತ್ತದೆ ಎಂದು ಮ್ಯಾನೇಜರ ನಮಗೆ ತಿಳಿಸಿದರು ಎನ್ನುವ ಬಗ್ಗೆ ಮತ್ತು ಆ ಬಗ್ಗೆ ವಿಚಾರಣೆ ಮಾಡಿದ ಬಗ್ಗೆ ನನ್ನ ಬಳಿ ದಾಖಲಾತಿಗಳು ಇಲ್ಲ. ಸಾಕ್ಷಿ ಮುಂದುವರೆದು, ನಾವು ನೋಟಿಸ್ಸ ಕಳುಹಿಸಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ನೋಟಿಸ್ಸನ್ನು ಈಗ ಒಂದು ವಾರದ ಹಿಂದೆ ಕಳುಹಿಸಿರುತ್ತೇವೆ, ಸದರಿ ನೋಟಿಸ್ಸಗೆ ಇನ್ನೂ ಯಾವುದೇ ಉತ್ತರ ಬಂದಿಲ್ಲ. ಮೂಲ ಖರೀದಿ ಪತ್ರವನ್ನು ಹಾಜರುಪಡಿಸಿದರೇ, ಸಾಕಷ್ಟು ವಿಷಯ ನ್ಯಾಯಾಲಯದ ಮುಂದೆ ಬರುತ್ತದೆ ಎನ್ನುವ ಕಾರಣಕ್ಕಾಗಿ ಅದನ್ನು ಹಾಜರುಪಡಿಸಿದ್ದು ಇರುವುದಿಲ್ಲ ಎಂದರೆ ಸುಳ್ಳು.

**ಮರು ವಿಚಾರಣೆ ಇಲ್ಲ .**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)**

ಓ ಹೆ ಕೇ ಸರಿ ಇದೆ.

**Sd/-**

**ಸಿವಿಲ್ ಜಡ್ಜ, ಮುಂಡಗೋಡ.**